



ಅಮೆರಿಕದ ಕ್ಯಾಲಿಫೋರ್ನಿಯದ ಅರ್ವೈನ್ ನಗರದ 'ಮೇಸನ್ ಉದ್ಯಾನವನ' ಪ್ರಕೃತಿಪ್ರಿಯರ ಪಾಲಿಗೆ ಚುಂಬಕ. ಉದ್ಯಾನ ಎನ್ನುವುದಕ್ಕಿಂತಲೂ ಆ ಪ್ರದೇಶವನ್ನು ಪಕ್ಷಿಕಾಶಿ ಎನ್ನುವುದೇ ಸರಿ.

ಕೆನಡಾದ ಹೆಬ್ಬಾತುಗಳು ಮೇಸನ್ ಉದ್ಯಾನದಲ್ಲಿ ಹೆಚ್ಚು ಕಂಡುಬರುತ್ತವೆ ಎನ್ನುವುದನ್ನು ಕೇಳಿ ತಿಳಿದಿದ್ದೆ. ಹೆಬ್ಬಾತುಗಳಿಗಿಂತಲೂ ಉದ್ಯಾನದಲ್ಲಿ ವಿಹರಿಸುತ್ತಿದ್ದ ವೈವಿಧ್ಯಮಯ ನೀರು ಹಕ್ಕಿಗಳನ್ನು ಕಂಡು ಬೆರಗುಗೊಂಡೆ. ಉದ್ಯಾನದಲ್ಲಿದ್ದ ಕೃತಕ ಕೊಳದಲ್ಲಿ ಹಾಗೂ ಅದರ ಸುತ್ತಮುತ್ತ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಬಾತುಗಳು, ಹೆಬ್ಬಾತುಗಳು, ಕ್ರೌಂಚಗಳು, ಮಡ್ ಹೆನ್ ಎಂದೂ ಕರೆಯಲಾಗುವ ಅಮೆರಿಕನ್ ಕೂಟ್ ಸೇರಿದಂತೆ ಪಕ್ಷಿಗಳ ದಂಡೇ ಅಲ್ಲಿದೆ.

ಕೊಳದ ಸುತ್ತಲೂ ಕಾಲ್ನಡಿಗೆಯಲ್ಲಿ ಸಾಗುತ್ತ ಪಕ್ಷಿಲೋಕವನ್ನು ಕಣ್ತುಂಬಿಕೊಳ್ಳಬಹುದು. ಈ 'ಹಾರಾಡುವ ಹಾಡು'ಗಳ ಹಾರಾಟ, ಈಜಾಟ, ಆಹಾರಕ್ಕಾಗಿ ಹುಡುಕಾಟ, ದಡದಲ್ಲಿ ಹಾಗು ಬಂಡೆಗಳ ಮೇಲೆ ಫೋಟೊಗೆ ಪೋಸ್ ನೀಡುವಂತೆ ಅವು ಕೂರುವ ಪರಿ, ಎಲ್ಲವೂ ಅತ್ಯಂತ ಚೇತೋಹಾರಿ ದೃಶ್ಯಗಳು. ಕೊಳದಲ್ಲಿನ ಬಂಡೆಗಳ ಮೇಲೆ ಬಿಸಿಲಿಗೆ ಮೈಯೊಡ್ಡಿದ್ದ ಅಗಣಿತ ನೀರಾಮೆಗಳು ನೋಡುಗರಲ್ಲಿ ಮುದ್ದು ಉಕ್ಕಿಸುವಂತಿದ್ದವು.

ಕಾಲು ಹಾದಿ, ಹುಲ್ಲು ಹಾಸು, ಕಿರು ದಿಬ್ಬಗಳು – ಎಲ್ಲೆಡೆಯೂ ಪಕ್ಷಿಗಳೇ ಪಕ್ಷಿಗಳು! ಜನರ ಇರುವನ್ನೇ ಮರೆತಂತೆ ಜನರ ನಡುವೆಯೇ ಪಕ್ಷಿಗಳ ಓಡಾಟ–ಹಾರಾಟ. ಅಷ್ಟೊಂದು ಬಗೆಯ ಪಕ್ಷಿಗಳನ್ನು ಅತ್ಯಂತ ಸನಿಹದಿಂದ ನಾನು ನೋಡಿದ್ದು ಅದೇ ಮೊದಲು. ಈ ಮೊದಲು ನೋಡಿರುವ ಪಕ್ಷಿಧಾಮಗಳಲ್ಲಿ ಇಂತಹ ಸುಂದರ ಅನುಭವ ದಕ್ಕಿರಲಿಲ್ಲ.

ವನವಿಹಾರಿಗಳಲ್ಲಿ ಹಲವರು ಸಾಕು ನಾಯಿಗಳನ್ನು ಜೊತೆಯಲ್ಲಿ ಕರೆತಂದಿದ್ದರು. ಕೆಲವು ನಾಯಿಗಳು ಪಕ್ಷಿಗಳನ್ನು ಕಂಡು ಜೋರಾಗಿ ಬೊಗಳುತ್ತಿದ್ದರೆ, ಇನ್ನು ಕೆಲವು ಹಕ್ಕಿಗಳ ಹಿಂಡನ್ನು ಅಟ್ಟಿಸಿಕೊಂಡು ಹೋಗುವ ಕಣ್ಣಾಮುಚ್ಚಾಲೆ ಆಟದಲ್ಲಿ ತೊಡಗಿದ್ದವು. ನಾಯಿಗಳ ಬೊಗಳುವಿಕೆಗೆ ಹೆದರಿದ ಹಕ್ಕಿಗಳು ಗುಂಪಾಗಿ ಹಾರಿ ಹೋಗಿ ಕೊಳದಲ್ಲಿ ಆಶ್ರಯ ಪಡೆದು, ನಾಯಿಗಳನ್ನು ಅಣಕಿಸುವಂತೆ ಅವುಗಳತ್ತ ನೋಡುತ್ತಿದ್ದವು. ಬೊಗಳುವ ನಾಯಿ ಕಚ್ಚುವುದಿಲ್ಲ ಎನ್ನುವ ಮಾತು ನೆನಪಿಗೆ ಬಂದಂತೆ, ಮತ್ತೆ ಹಾರಾಟ, ಆಹಾರದ ಹುಡುಕಾಟ.

ಮೇಸನ್ ಉದ್ಯಾನದ ಭೌಗೋಳಿಕ ಚೆಲುವು ವಿಶಿಷ್ಟವಾದುದು. ಕಿರು ದಿಬ್ಬಗಳು, ಪರ್ಯಾಯ ದ್ವೀಪಗಳು, ವನಭೋಜನ ಮಂಟಪಗಳು, ಆಟದ ಮೈದಾನಗಳು, ವ್ಯಾಯಾಮ ಪರಿಕರಗಳು, ವರ್ತುಲ ಕ್ರೀಡಾಂಗಣ, ಮಕ್ಕಳಿಗೆ ಮೀಸಲಾದ ಕ್ರೀಡಾ ಪರಿಕರಗಳು, ಕುಳಿತುಕೊಳ್ಳಲು ಅಲ್ಲಲ್ಲಿ ಆಸನಗಳು, ಬಳಸಲು ಯೋಗ್ಯವಾದ ಶೌಚಾಲಯಗಳು, ನಡಿಗೆ ಪಥ, ಎಲ್ಲವೂ ಅಲ್ಲಿವೆ. ಮರಗಳು ಅಷ್ಟು ದಟ್ಟವಾಗಿಲ್ಲ ಎನ್ನುವುದು ಸಣ್ಣ ಕೊರತೆ ಎನಿಸಿತು.

ಅರ್ವೈನ್ ನಗರದ ಅನೇಕ ದೊಡ್ಡ ಉದ್ಯಾನವನಗಳಲ್ಲಿ ಮೇಸನ್ ಪಕ್ಷಿಕಾಶಿಯೂ ಒಂದು. ಅದರ ಪೂರ್ಣ ಹೆಸರು 'ವಿಲಿಯಂ ಆರ್ ಮೇಸನ್ ರೀಜನಲ್ ಪಾರ್ಕ್'. ಇದು ಮೊದಲು ರಾಂಚೋ ಸಾನ್ ಹೊಯಾಕ್ವಿನ್ ಪ್ರದೇಶಕ್ಕೆ ಸೇರಿತ್ತು. 1966ರಿಂದ 1973ರ ಅವಧಿಯಲ್ಲಿ ಅರ್ವೈನ್ ಕಂಪನಿಯ ಅಧ್ಯಕ್ಷರಾಗಿದ್ದ ವಿಲಿಯಂ ಆರ್ ಮೇಸನ್ ಈ ಪ್ರದೇಶವನ್ನು ಉದ್ಯಾನವನವಾಗಿ ಅಭಿವೃದ್ಧಿಪಡಿಸಲು ಕಾರಣಕರ್ತರಾದರು. 1973ರಲ್ಲಿ ಉದ್ಯಾನದ ಮೊದಲ ಹಂತ ನಿರ್ಮಾಣಗೊಂಡಿತು. 1978ರಲ್ಲಿ ಪೂರ್ಣಗೊಂಡ ಎರಡನೆಯ ಹಂತದಲ್ಲಿ 9 ಎಕರೆ ವಿಸ್ತೀರ್ಣದ ಕೊಳ ನಿರ್ಮಿಸಲಾಯಿತು. 339 ಎಕರೆ ವಿಸ್ತೀರ್ಣದ ಮೇಸನ್ ಉದ್ಯಾನವನ ಬೆಂಗಳೂರಿನ ಲಾಲ್‌ಬಾಗ್ ಅಥವಾ ಕಬ್ಬನ್ ಪಾರ್ಕ್‌ಗಳಿಗಿಂತ ಸ್ವಲ್ಪ ದೊಡ್ಡದು. ಇಂಥ ಉದ್ಯಾನಗಳೇ ಅಲ್ಲವೇ ನಗರದ ಜೀವನಾಡಿಗಳು!

ಪ್ರತಿಕ್ರಿಯಿಸಿ: feedback@sudha.co.in







